# ಹತ್ತನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ 2018–19

## 1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

| ಉದ್ದಿಷ್ಟಗಳು | ಪ್ರತಿಶತ | ದತ್ತ ಅಂಕಗಳು |
|---|---|---|
| ಸ್ಮರಣೆ | 25 | 25 |
| ಗ್ರಹಿಕೆ | 37 | 37 |
| ಅಭಿವ್ಯಕ್ತಿ | 34 | 34 |
| ಪ್ರಶಂಸೆ | 04 | 04 |
| ಒಟ್ಟು | 100 | 100 |

## 2.ವಿಷಯಾನುಸಾರ ಪ್ರಾಮುಖ್ಯತೆ :

| ವಿಷಯ/ ಉಪಘಟಕ | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳು |
|---|---|---|---|
| ಗದ್ಯ | 26 | 26 | 13 |
| ಪದ್ಯ | 28 | 28 | 11 |
| ಪಠ್ಯ ಪೋಷಕ ಅಧ್ಯಯನ | 09 | 09 | 05 |
| ಅಪಠಿತ ಗದ್ಯ | 04 | 04 | 1 |
| ವ್ಯಾಕರಣಾಂಶಗಳು,ಛಂದಸ್ಸು, ಅಲಂಕಾರ ಮತ್ತು ವಾಕ್ಯ ರಚನೆ | 33 | 33 | 19 |
| ಒಟ್ಟು | 100 | 100 | 49 |

## 3 ಪ್ರಶ್ನಾನುಸಾರ ಪ್ರಾಮುಖ್ಯತೆ :

| ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅಪೇಕ್ಷಿತ ಸಮಯ |
|---|---|---|---|---|
| ವಸ್ತುನಿಷ್ಠ | 14 | 14 | 14 | 25 ನಿಮಿಷಗಳು |
| ಕಿರು ಉತ್ತರಗಳು (1) | 9 | 9 | 9 | 15 ನಿ. |
| ಕಿರು ಉತ್ತರಗಳು (2) | 20 | 20 | 10 | 35 ನಿ. |
| ದೀರ್ಘ ಉತ್ತರಗಳು (1) | 27 | 27 | 09 | 45 ನಿ. |
| ದೀರ್ಘ ಉತ್ತರಗಳು (2) | 20 | 20 | 05 | 25 ನಿ. |
| ದೀರ್ಘ ಉತ್ತರಗಳು (3) | 10 | 10 | 02 | 20 ನಿ. |
| ಒಟ್ಟು | 100 | 100 | 49 | 165 + 15 ನಿಮಿಷಗಳು |

4. ಕಠಿಣತೆಯ ಮಟ್ಟ :

| ಸುಲಭ | ಸಾಧಾರಣ | ಕಠಿಣ | ಒಟ್ಟು |
|---|---|---|---|
| 30% | 50% | 20% | 100 % |

5. ಪ್ರಶ್ನೆಗಳ ಸ್ವರೂಪ ಮತ್ತು ಅಂಕ ವಿತರಣೆ :

| | | |
|---|---|---|
| ವಸ್ತುನಿಷ್ಟ ಪ್ರಶ್ನೆಗಳು | 1 ಅಂಕದ 14 ಪ್ರಶ್ನೆಗಳು | 14 * 1 = 14 |
| ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 09 ಪ್ರಶ್ನೆಗಳು | 09 * 1 = 09 |
| 3–4 ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕಗಳ 10 ಪ್ರಶ್ನೆಗಳು | 10 * 2 = 20 |
| 5–6 ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕಗಳ 9 ಪ್ರಶ್ನೆಗಳು | 9 * 3 = 27 |
| 5–6 ವಾಕ್ಯಗಳಲ್ಲಿ ಉತ್ತರಿಸುವುದು | 4 ಅಂಕಗಳ 5 ಪ್ರಶ್ನೆಗಳು | 5 * 4 = 20 |
| ಪ್ರಬಂಧ & ವಿಸ್ತಾರವಾಗಿ ಉತ್ತರಿಸುವುದು | 5 ಅಂಕಗಳ 2 ಪ್ರಶ್ನೆಗಳು | 2 * 5 = 10 |
| ಒಟ್ಟು | 49 ಪ್ರಶ್ನೆಗಳು | 100 ಅಂಕಗಳು |

6. ಪ್ರಶ್ನೆ ಪತ್ರಿಕೆ ಅಂಕ ವಿತರಣೆ :

ಗದ್ಯ : 26, ಪದ್ಯ : 28, ಪಠ್ಯ ಪೋಷಕ ಅಧ್ಯಯನ : 09, ಅಪಠಿತ ಗದ್ಯ 04
ವ್ಯಾಕರಣ, ಅಲಂಕಾರ, ಛಂದಸ್ಸು ಮತ್ತು ವಾಕ್ಯರಚನೆ : 33

ಒಟ್ಟು : 100 ಅವಧಿ : 3_00 ಗಂಟೆಗಳು

| ಪ್ರಶ್ನೆಗಳ ಸ್ವರೂಪ | ಗದ್ಯ | ಪದ್ಯ | ಪೋಷಕ ಅಧ್ಯಯನ | ಅಪಠಿತ ಗದ್ಯ | ವ್ಯಾಕರಣ | ವಾಕ್ಯ ರಚನೆ | ಒಟ್ಟು |
|---|---|---|---|---|---|---|---|
| 1. ಬಹು ಆಯ್ಕೆ | – | – | – | | 10*1 =10 | – | 10 |
| 2. ಸಂಬಂಧೀಕರಿಸಿ ಬರೆಯುವುದು | – | – | – | | 4*1=4 | – | 04 |
| 3. ಒಂದು ವಾಕ್ಯದ ಉತ್ತರಗಳು | 5*1=05 | 3*1=03 | 1*1=1 | | – | – | 09 |
| 4. ಮೂರು ನಾಲ್ಕು ವಾಕ್ಯಗಳ ಉತ್ತರಗಳು | 4*2=8 | 3*1=3 | 4*2=08 | | – | – | 20 |
| 5. ಐದಾರು ವಾಕ್ಯಗಳ ಉತ್ತರಗಳು – ಸಂದರ್ಭಗಳು | 2*3=06 | 2*3=06 | – | | – | – | 12 |
| 6. ಕವಿ ಕೃತಿ ಪರಿಚಯ | 1*3=3 | 1*3=3 | – | | – | – | 06 |
| 7. ಛಂದಸ್ಸು | – | – | – | | 1*3=03 | – | 03 |
| 8. ಅಲಂಕಾರ | | – | – | | 1*3=03 | – | 03 |
| 9. ಗಾದೆಗಳು | | | | | | 1*3=3 | 03 |
| 10. ಕಂಠಪಾಠ | – | 1*4=04 | – | | – | – | 04 |
| 11. ಪದ್ಯವನ್ನು ಓದಿ ಅರ್ಥೈಸಿಕೊಂಡು ಅಡಕಗೊಂಡ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು | – | 1*4=04 | – | | – | – | 04 |
| 12. ಎಂಟು/ಹತ್ತು ವಾಕ್ಯಗಳ ಉತ್ತರಗಳು | 1*4 =04 | 1*4=04 | – | | – | – | 08 |
| 13. ಅಪಠಿತ ಗದ್ಯ ಓಡಿಕೊಂಡು ಪ್ರಶ್ನೆಗಳಿಗೆ ಉತ್ತರಿಸುವುದು | | | | 1*4= 4 | | | |
| 14. ಪತ್ರ ಲೇಖನ | – | – | – | | – | 1*5=05 | 05 |
| 15. ಪ್ರಬಂಧ ರಚನೆ | – | – | – | | – | 1*5=05 | 05 |
| ಒಟ್ಟು | 26 | 28 | 09 | 04 | 20 | 13 | 100 |

# ನೀಲ ನಕಾಶೆ

| ಕ್ರ.ಸಂ | ಪಾಠದ ಹೆಸರು | ಜ್ಞಾನ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ.1 | ಕಿ.ಉ .2 | ದೀ. ಉ.2 | ವ.ನಿ | ಕಿ. ಉ .1 | ಕಿ. ಉ. 2 | ದೀ. ಉ.1 | ಉ | ವ. ನಿ | ಕಿ. ಉ. 2 | ದೀ ಉ. 1 | ದೀ.ಉ .2 | ದೀ.ಉ .3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ.2 | ದೀ. ಉ.3 | | |
| 1 | ಯುದ್ಧ | | | | | | | | | | | | 3(1) | | | | | | | 3(1) | | | 3 | 1 |
| 2 | ಶಬ | 1(1) | | | | | | | 3(1) | | | | | | | | | 1(1) | | 3(1) | | | 4 | 2 |
| 3 | ಲಂಡ ನಗರ | 1(1) | | | | | | 2(1) | | | | | | | | | | 1(1) | 2(1) | | | | 3 | 2 |
| 4 | ಭಾಗ್ಯಶಿಲ್ಪಿಗ | | | | | | | | | | | | | 4(1) | | | | | | | 4(1) | | 4 | 1 |
| 5 | ಎಡ ಬಿದ್ದ ಅಕ್ಷ | | | | | | | | | | | | 3(1) | | | | | | | 3(1) | | | 3 | 1 |
| 6 | ವ್ಯಾಘ್ರಗೀ | 1(1) | | | | | | 2(1) | | | | | | | | | | 1(1) | 2(1) | | | | 3 | 2 |
| 7 | ವೃ ಸಾಕ್ಷಿ | 1(1) | | | | | | 2(1) | | | | | | | | | | 1(1) | 2(1) | | | | 3 | 2 |
| 8 | ಸುಕುಮಾರಸ್ವಾ ಕ | 1(1) | | | | | | 2(1) | | | | | | | | | | 1(1) | 2(2) | | | | 3 | 2 |
| | **ಗದ್ಯ ಒಟ್ಟು** | **1(5)** | | | | | | **2(3)** | **3(1)** | | | | **3(2)** | **4(1)** | | | | **1(5)** | **2(4)** | **3(3)** | **4(1)** | | **26** | **13** |
| 1 | ಸಂಕಲ ಗೀ | | | | | | | | | | | | | 4(1) | | | | | | | 4(1) | | 4 | 1 |
| 2 | ಹಕ್ಕಿ ಹಾರುತಿದೆನೋಡಿ | 1(1) | | | | | | | | | | | 3(1) | | | | | 1(1) | | 3(1) | | | 4 | 2 |
| 3 | ಹಲಗ ಬೇಡರ | | | | | | | | | | | | 3(1) | | | | | | | 3(1) | | | 3 | 1 |
| 4 | ಕೌರವೇಂದ್ರನ ಕೊ ನೀನು | | | | | | | | | | | | | | | 4(1) | | | | | 4(1) | | 4 | 1 |
| 5 | ಹಸುರು | | | | | | | | 3(1) | | | | | | | | | | | 3(1) | | | 3 | 1 |
| 6 | ಛಲವ ಮರೆವ | | | 4(1) | | | | | | | | | | | | | | | | | 4(1) | | 4 | 1 |
| 7 | ವೀರಲವ | 1(1) | | | | | | 2(1) | | | | | | | | | | 1(1) | 2(1) | | | | 3 | 2 |
| 8 | ಕೆ ನೆ ಮೀಸೆವೊತ್ತ | 1(1) | | | | | | 2(1) | | | | | | | | | | 1(1) | 2(1) | | | | 3 | 2 |
| | **ಪದ ಒಟ್ಟು** | **1(3)** | **2(1)** | **4(1)** | | | | **2(2)** | **3(1)** | | | | **3(2)** | **4(2)** | | **4(1)** | | **1(3)** | **2(3)** | **3(3)** | **4(3)** | | **28** | **11** |
| | **ಅಪಠಿ ಗದ್ಯ** | | | | | | | | **1(4)** | | | | | | | | | | | | **4(1)** | | **4** | **1** |
| | | | | | | | | | | | | | | | | | | | | | | | | |

| | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | ಪಠ್ಯ ಪೋ ಅಧ್ಯ | | | | | | | | | | | | | | | | | | | | | |
| 1 | ವಿವೇಕಾನಂ ಚಿಂತ | | | | | | | | | | **2(1)** | | | | | | | 2(1) | | | | 2 | 1 |
| 2 | ವಸಂತ ಮುಖ ತೋರ | | 1(1) | | | | | | | | | | | | | | 1(1) | | | | | 1 | 1 |
| 3 | ಭಗತ ಸಿಂ | | | | | | | 2(1) | | | | | | | | | | 2(1) | | | | 2 | 1 |
| 4 | ಮೃಗ ಮತ್ತು ಸುಂದ | | | | | | | | | | 2(1) | | | | | | | 2(1) | | | | 2 | 1 |
| 5 | ಒಗಟುಗ | | | | | | | 2(1) | | | | | | | | | | 2(1) | | | | 2 | 1 |
| | ಒಟ್ಟು | | **1(1)** | | | | | **2(2)** | | | **2(2)** | | | | | | **1(1)** | **2(4)** | | | | **09** | **5** |
| 1 | ವ್ಯಾಕರಣಾ | **12(1)** | | | | **2(1)** | | | | | | | | | | **1(14)** | | | | | | 14 | 14 |
| 2 | ಛಂದಸ್ಸು | | | | | | | | 3(1) | | | | | | | | | | 3(1) | | | 3 | 1 |
| 3 | ಅಲಂ | | | | | | | | 3(1) | | | | | | | | | | 3(1) | | | 3 | 1 |
| 4 | ಗ ವಿಸ್ತರ | | | | | | | | 3(1) | | | **3(1)** | | | | | | | 3(1) | | | 3 | 1 |
| 5 | ಪತ್ರ ಮತ್ತು ಪ್ರಬಂ | | | | | | | | | | | | | **5(2)** | | | | | | | **5(2)** | 10 | 2 |
| | ಒಟ್ಟು | **12(1)** | | | | **2(1)** | | | **3(2)** | | | **3(1)** | | **5(2)** | | **1(14)** | | | **3(3)** | | **5(2)** | **33** | **19** |
| | **ಸಮ ಒಟ್ಟು** | **12(1)** | | **2(3)** | **4(1)** | **2(1)** | | **2(8)** | **3(5) 4 (1** | | **2(2)** | **3(4)** | **4(2)** | **5(2)** | **4(1)** | **1(14)** | **1(9)** | **2 (10)** | **3(9)** | **4(5)** | **5(2)** | **100** | **49** |
| | ಶೇಕ ಪ್ರಮ | **25** | | | | 37 | | | | **34** | | | | | **4** | **100** | | | | | | | |

**ಸೂಚ** : ಆವರಣದ ಒಳ ಅಂಕ, ಹೊರಗ ಪ್ರಶ್ನೆಗಳ ಸಂ ಇ .

8050557779

# ಹತ್ತನೆಯ ತರಗತಿ ಮಾದರಿ ಪ್ರಶ್ನೆ ಪತ್ರಿಕೆ 2018–19

## ಪ್ರಥಮ ಭಾಷೆ ಕನ್ನಡ

ಗರಿಷ್ಠ ಅಂಕ: 100 ಪೂರ್ವ ಸಿದ್ಧತಾ ಪರೀಕ್ಷೆ ಪ್ರಶ್ನೆ ಪತ್ರಿಕೆ ಅವಧಿ: 3–00 ಗಂಟೆಗಳು

ಸೂಚನೆಗಳು: ಪ್ರಶ್ನೆಪತ್ರಿಕೆಯು ಎ.ಬಿ.ಸಿ. ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.
ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ.
ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ

**ಭಾಗ –'ಎ'**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ: 9x1=9**

1. ಸೌಮಿತ್ರಿ ಎಂದು ಯಾರನ್ನು ಕರೆಯುತ್ತಾರೆ?
2. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು?
3. ಶಾನುಭೋಗರು ಇರಸಾಲಿಗಾಗಿ ಎಲ್ಲಿಗೆ ಹೋಗಿದ್ದರು?
4. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?
5. ಯಶೋಭದ್ರೆಯು ರತ್ನಗಂಬಳಿಗಳನ್ನು ಯಾರಿಗೆ ಕೊಟ್ಟಳು?
6. ಹಕ್ಕಿಯ ಕಣ್ಣುಗಳು ಯಾವುವು?
7. ವಾಲ್ಮೀಕಿ ಮುನಿಯು ಎಲ್ಲಿಗೆ ಹೋಗಿದ್ದರು?
8. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು?
9. ಹಾಲುಗಲ್ಲದ ಹಸುಳೆ ಏನು ಮಾಡುತ್ತಿದ್ದಳು?

**ಈ ಕೆಳಗಿನವುಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ: 10x2=20**

10. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಠಿಯ ವಿಶೇಷತೆ ಏನು?
11. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.
12. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?
13. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾಧಿ ಇದೆ ಎಂದುಕೊಳ್ಳಲು ಕಾರಣವೇನು?
14. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದದ ಸಾರಾಂಶ ಬರೆಯಿರಿ.
15. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?
16. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು. ಏಕೆ?
17. ಭಗತ್ ಸಿಂಗ್ ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ?
18. ವರ್ತಕನ ಮಕ್ಕಳ ಸ್ವಭಾವಗಳನ್ನು ಪಟ್ಟಿಮಾಡಿರಿ.
19. ಉತ್ತರಾಣಿ ಗಿಡದ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ: 4x3=12**

20. "ನನ್ನ ಮೊಮ್ಮಗುವಿನ ಹೆಣವಿದೆ; ಅದನ್ನೂ ನೋಡಿ!"
21. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು"
22. "ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ"
23. "ಬೆನ್ನಬೆನ್ನತ್ತಿ ತಿರಿತಿರ್ವಿ ಕಡಿದರೂ ಏನು ಉಳಿಯದ್ದಂಗ"

**ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ: 2x3=6**

24. ಪು.ತಿ.ನ
25. ಕುವೆಂಪು

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ: 1x4=4**

26. ನೆಲಕಿಳಿವೆನೆಂದು ________________ 
________________________
________________________
________________ ಮದುವಾಳ್ದಪನೇ

ಅಥವಾ

ಪುಟ್ಟಿದ ________________
________________________
________________________
________________ ಛಲಮನೆ ಮೆರೆವಂ

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ:** **1x4=4**

27. ಎಡದ ಮೈಯಲಿ ಕೌರವೇಂದ್ರರ
ಗಡಣ ಬಲದಲಿ ಪಾಂಡು ತನಯರ
ಗಣವಿದಿರಲಿ ಮಾದ್ರ ಮಾಗಧ ಯಾದವಾದಿಗಳು
ನಡುವೆ ನೀನೋಲಗದೊಳೊಪ್ಪುವ
ಕಡುವಿಲಾಸವ ಬಿಸುಟು ಕುರುಪತಿ
ನುಡಿಸೆ ಜೀಯ ಹಸಾದವೆಂಬುದು ಕಷ್ಟ ನಿನಗೆಂದ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **2x4=8**

28. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ "ಮೈಸೂರು ಮಾದರಿ ರಾಜ್ಯ" ಹೇಗಾಯಿತು?

**ಅಥವಾ**

ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

29. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಜಿ.ಎಸ್.ಶಿವರುದ್ರಪ್ಪನವರ ಆಶಯ?

**ಅಥವಾ**

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

**ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:** **4=(2+2)**

ಭಾರತ ಅಥವಾ ಇಂಡಿಯಾ ಎಂದು ಕರೆಯಲ್ಪಡುವ ದಕ್ಷಿಣ ಏಷ್ಯಾದ ಅತಿ ದೊಡ್ಡ ದೇಶದ ಅಧಿಕೃತ ಹೆಸರು. ಭಾರತ ಸ್ವತಂತ್ರ ಗಣರಾಜ್ಯ. ಭಾರತೀಯ ಉಪಖಂಡದ ಪ್ರಮುಖ ದೇಶವಾಗಿದ್ದೂ ಪ್ರಪಂಚದ ಎರಡನೇ ಅತಿ ಹೆಚ್ಚು ಜನಸಂಖ್ಯೆ ಹೊಂದಿದ್ದು ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಭಾರತವು 125 ಕೋಟಿಗೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು ಒಟ್ಟು 800 ವಿಭಿನ್ನ ಭಾಷೆಗಳನ್ನು ಉಪಯೋಗಿಸುವ ಜನರನ್ನು ಹೊಂದಿದೆ.ಆಗ್ನೇಯದಲ್ಲಿ ಬಂಗಾಳ ಕೊಲ್ಲಿ,ದಕ್ಷಿಣದಲ್ಲಿ ಹಿಂದೂ ಮಹಾ ಸಾಗರ,ನೈರುತ್ಯದಲ್ಲಿ ಅರಬ್ಬಿ ಸಮುದ್ರಗಳಿಂದ ಸುತ್ತುವರಿದಿದ್ದು , ಪಶ್ಚಿಮದಲ್ಲಿ ಪಾಕಿಸ್ತಾನ, ಈಶಾನ್ಯದಲ್ಲಿ ಚೀನಾ,ನೇಪಾಳ,ಭೂತಾನ , ಪೂರ್ವದಲ್ಲಿ ಬರ್ಮಾ, ಬಾಂಗ್ಲಾದೇಶ ಗಳೊಂದಿಗೆ ಗಡಿಯನ್ನು ಹಂಚಿಕೊಂಡಿದೆ. ಕೊಳ್ಳುವ ಶಕ್ತಿಯ ಮೇರೆಗೆ, ಪ್ರಪಂಚದ ನಾಲ್ಕನೇ ಅತಿ ದೊಡ್ಡ ಆರ್ಥಿಕ ವ್ಯವಸ್ಥೆಯನ್ನು ಹೊಂದಿದೆ. ಭಾರತ ದೇಶವು ಪ್ರಾಚೀನ ಸಿಂಧೂತಟದ ನಾಗರೀಕತೆಯ ತವರು ಮನೆಯಾಗಿದೆ. ಅನೇಕ ಐತಿಹಾಸಿಕ ವಾಣಿಜ್ಯ ಮಾರ್ಗಗಳು ಹಾಗು ಪ್ರಾಚೀನ ಸಾಮ್ರಾಜ್ಯಗಳು ಭಾರತ ದೇಶದಲ್ಲಿ ಉಗಮಿಸಿವೆ. ಪ್ರಪಂಚದ ನಾಲ್ಕು ಪ್ರಮುಖ ಧರ್ಮಗಳಾದ ಹಿಂದೂಧರ್ಮ, ಬೌದ್ಧ, ಜೈನ್ ಧರ್ಮ ಮತ್ತು ಸಿಖ್ ಧರ್ಮಗಳು ಭಾರತದಲ್ಲಿ ಆರಂಭವಾಗಿವೆ. ಭಾರತವು ಎಲ್ಲಾ ಧರ್ಮಗಳನ್ನು ಒಳಗೊಂಡಿದ್ದರೂ ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವ ದೇಶವಾಗಿದೆ. ಅದರ ಜನರ ಧರ್ಮ, ಭಾಷೆ, ವೇಷ, ಸಂಸ್ಕೃತಿ, ಭೌತಿಕ ಪರಿಸರ, ವಾಯುಗುಣ, ಹವಾಗುಣ ಎಲ್ಲ ಅಂಶಗಳಲ್ಲಿಯೂ ವೈವಿಧ್ಯತೆಯನ್ನು ಹೊಂದಿದ್ದರೂ ಅದು ಏಕತೆಯನ್ನು ಹೊಂದಿದ್ದು ಪ್ರಪಂಚದ ಇತರ ದೇಶಗಳ ಸಂಸ್ಕೃತಿಗಳೊಂದಿಗೆ ಪೈಪೋಟಿಯನ್ನು ತೋರುತ್ತಿದೆ.

30. ಪ್ರಶ್ನೆಗಳು: 1. ಭಾರತ ವೈವಿಧ್ಯತೆಯಲ್ಲಿ ಏಕತೆಯನ್ನು ಹೇಗೆ ಸಾಧಿಸಿದೆ?
2. ಭಾರತ ದೇಶದ ಮೇರೆಗಳು ಯಾವುವು?

## ಭಾಗ – 'ಬಿ'

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ:** **10x1=10**

31. ವರ್ಗದ ಮೊದಲನೆಯ ಮತ್ತು ಮೂರನೆಯ ಅಕ್ಷರಗಳನ್ನು ಹೀಗೆ ಕರೆಯುವರು.
ಎ) ಮಹಾಪ್ರಾಣ ಬಿ) ಅಲ್ಪಪ್ರಾಣ ಸಿ) ಅನುನಾಸಿಕ ಡಿ) ಯೋಗವಾಹಗಳು

32. ಇವುಗಳಲ್ಲಿ ಅನ್ವರ್ಥನಾಮಪದಕ್ಕೆ ಉದಾಹರಣೆ
ಎ) ವಿದ್ಯಾರ್ಥಿ ಬಿ) ಬೆಟ್ಟ ಸಿ) ಶಂಕರ ಡಿ) ನದಿ

33. ಸಪ್ತಮಿ ವಿಭಕ್ತಿಯ ಕಾರಕಾರ್ಥ
ಎ) ಕರ್ತರ್ಥ ಬಿ) ಕರ್ಮಾರ್ಥ ಸಿ) ಅಧಿಕರಣ ಡಿ) ಸಂಪ್ರದಾನ

34. ಪ್ರಾಣಿಗಳು ಬರಗಾಲದಲ್ಲಿ ಸ್ವಲ್ಪ ಮೇವನ್ನಾದರೂ ತಿನ್ನಲಿ ಎಂದು ಜನರು ಹೋರಾಡಿದರು–
ಗೆರೆ ಎಳೆದ ಪದದ ಕ್ರಿಯಾರೂಪ
ಎ) ಸಂಭಾವನಾರ್ಥಕ ಬಿ) ನಿಷೇಧಾರ್ಥಕ ಸಿ) ಅವಧಾರಣಾರ್ಥಕ ಡಿ) ವಿಧ್ಯರ್ಥಕ

35. ಈ ಪದಗಳಲ್ಲಿ ಲೋಪಸಂಧಿಗೆ ಉದಾಹರಣೆ
ಎ) ಮಗುವಿಗೆ ಬಿ) ಹೊಸಗಾಲ ಸಿ) ಏಕೈಕ ಡಿ) ಊರೂರು

36. 'ಮೇಜು' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ.
ಎ) ಇಂಗ್ಲೀಷ್ ಬಿ) ಉರ್ದು ಸಿ) ಪೋರ್ಚುಗೀಸ್ ಡಿ) ಪಾರ್ಸಿ

37. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

ಎ) ವಿವರಣಾತ್ಮಕ ಚಿಹ್ನೆ ಬಿ) ಉದ್ಧರಣ ಚಿಹ್ನೆ ಸಿ) ವಾಕ್ಯವೇಷ್ಟನ ಚಿಹ್ನೆ ಡಿ) ಭಾವಸೂಚಕ ಚಿಹ್ನೆ

38. ಪ್ರವಾಸವು ದಿನದಿನದ ಬೇಸರವನ್ನು ದೂರ ಮಾಡುತ್ತಾ ನಮ್ಮ ಅನುಭವವನ್ನೂ ಹೆಚ್ಚಿಸುತ್ತದೆ. ಈ ವಾಕ್ಯದ ವಿಧ

ಎ) ಸಾಮಾನ್ಯ ವಾಕ್ಯ ಬಿ) ಮಿಶ್ರವಾಕ್ಯ ಸಿ) ಸಂಯೋಜಿತ ವಾಕ್ಯ ಡಿ) ಪ್ರಶ್ನಾರ್ಥಕ ವಾಕ್ಯ

39. ಇವುಗಳಲ್ಲಿ ಗುಂಪಿಗೆ ಸೇರದ ಸಮಸ್ತ ಪದ

ಎ) ಕೈಯನ್ನು ಬಿ) ಅಂಗೈ ಸಿ) ನಟ್ಟಿರುಳು ಡಿ) ಮುಂಗುರುಳು

40. ಇವುಗಳಲ್ಲಿ ದ್ವಿರುಕ್ತಿಗೆ ಉದಾಹರಣೆ

ಎ) ಇಲ್ಲಿಲ್ಲ ಬಿ) ಅಲ್ಲಲ್ಲಿ ಸಿ) ಮನೆಮಾರು ಡಿ) ಅಬ್ಬಬ್ಬಾ

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ: 4x1=4**

41. ಮಾಡಲು : ಕೃದಂತಾವ್ಯಯ : : ಚಂದ್ರನಿಗಾಗಿ : __________

42. ಅನೃತ : ಸುಳ್ಳು : : ಪರದು : __________

43. ಹೀಂಗ : ಹೀಗೆ : : ಇಲ್ಲದ್ಹಂಗ : __________

44. ಭಕ್ತ : ಬಕುತ : : ಅಟವಿ : __________

**45. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ: 1x3=3**

ಪುಟ್ಟಿದ ನೂರ್ವರುಮೆನ್ನೊಡ

ವುಟ್ಟಿದ ನೂರ್ವರುಮಿದಿರ್ಚಿಸತ್ತೊಡೆ ಕೋಪಂ

**ಅಥವಾ**

ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ

**46.ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಡನೆ ಬರೆದು ಸಮನ್ವಯಗೊಳಿಸಿ: 1x3=3**

ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ

**ಅಥವಾ**

ಮಾರಿಗೌತಣವಾಯ್ತು ನಾಳಿನ ಭಾರತವು

**ಭಾಗ – 'ಸಿ'**

**47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ: 1x3=3**

* ಮನಸ್ಸಿದ್ದಲ್ಲಿ ಮಾರ್ಗವಿದೆ
* ಮಾತು ಬೆಳ್ಳಿ ಮೌನ ಬಂಗಾರ
* ಕೈ ಕೆಸರಾದರೆ ಬಾಯಿ ಮೊಸರು

**48. ನಿಮ್ಮನ್ನು ಸಕಲೇಶಪುರದ ಸರ್ಕಾರಿ ಪ್ರೌಢಶಾಲೆಯ ದೀಪಕ್ / ದೀಪಿಕಾ ಎಂದು ಭಾವಿಸಿಕೊಂಡು 1x5=5**

ನಿಮ್ಮ ಶಾಲೆಯಲ್ಲಿ ನಡೆದ ಕ್ರೀಡಾಕೂಟದ ವರದಿಯನ್ನು ಪ್ರಕಟಿಸುವಂತೆ ಕೋರಿ ವಿಜಯವಾಣಿ ಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ.

**ಅಥವಾ**

ನೀವು ಕ್ರೀಡಾಕೂಟದಲ್ಲಿ ಬಹುಮಾನ ಪಡೆದ ಬಗ್ಗೆ ತಿಳಿಸುತ್ತಾ ಅರಸೀಕೆರೆಯಲ್ಲಿರುವ ನಿಮ್ಮ ತಂದೆಯವರಿಗೆ ಒಂದು ಪತ್ರ ಬರೆ.

**49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1x5=5**

* ಮಳೆ ನೀರು ಕೊಯ್ಲು –ಪ್ರಯೋಜನಗಳು
* ಸ್ವ ಉದ್ಯೋಗದ ಮಹತ್ವ
* ಸಾಮಾಜಿಕ ಪಿಡುಗುಗಳು

## ಪ್ರಶ್ನೆ ಪತ್ರಿಕೆ ವಿಶ್ಲೇಷಣೆ: 165 ನಿಃ + 15 ನಿಃ = 180 ನಿಃ

| ಪ್ರಸ | ಘಟಕದ ಹೆಸ | ಉದ್ದಿಷ್ಟ | ನಿರ್ದಿ | ಅಂಕ | ಪ್ರಶ್ನೆ ಸ್ವರೂ | ಕ್ಲಿಷ್ಟತೆ | ಸಮಯ |
|---|---|---|---|---|---|---|---|
| 1 | ಶಬ | ಸ್ಮ | ಗುರುತಿಸುವ | 1 | ಕಿರು ಉತ್ತ 1 | ಸುಲಭ | 3ನಿಮಿ |
| 2 | ಲಂಡ ನಗರ | ಸ್ಮ | ಸ್ಮರಿಸುವ | 1 | ಕಿರು ಉತ್ತ 1 | ಸುಲಭ | 2 ನಿಮಿ |
| 3 | ವ್ಯಾಘ್ರಗೀ | ಸ್ಮ | ಸ್ಮರಿಸುವ | 1 | ಕಿರು ಉತ್ತ 1 | ಸುಲಭ | 2 ನಿಮಿ |
| 4 | ವೃಕ್ಷಸಾ | ಸ್ಮ | ಸ್ಮರಿಸುವ | 1 | ಕಿರು ಉತ್ತ 1 | ಸುಲಭ | 2 ನಿಮಿ |
| 5 | ಸುಕುಮಾರಸ್ವಾ ಕ | ಸ್ಮ | ಸ್ಮರಿಸುವ | 1 | ಕಿರು ಉತ್ತ 1 | ಸುಲಭ | 3 ನಿಮಿ |
| 6 | ಹಕ್ಕಿ ಹಾರುತ ನೋಡಿದಿ | ಸ್ಮ | ಸ್ಮರಿಸುವ | 1 | ಕಿರು ಉತ್ತ 1 | ಸುಲಭ | 2 ನಿಮಿ |
| 7 | ವೀರಲ | ಸ್ಮ | ಸ್ಮರಿಸುವ | 1 | ಕಿರು ಉತ್ತ 1 | ಸುಲಭ | 2 ನಿಮಿ |
| 8 | ಕಮ ಮೀಸವೊತ್ತ | ಸ್ಮ | ಸ್ಮರಿಸುವ | 1 | ಕಿರು ಉತ್ತ 1 | ಸುಲಭ | 2 ನಿಮಿ |
| 9 | ವಸಂತ ಮುಖ ತೋರಲ | ಸ್ಮ | ಸ್ಮರಿಸುವ | 1 | ಕಿರು ಉತ್ತ 1 | ಸುಲಭ | 2 ನಿಮಿ |
| 10 | ಲಂಡ ನಗರ | ಗ್ರಹಿ | ವಿವರಿಸು | 2 | ಕಿರು ಉತ್ತ 2 | ಸುಲಭ | 3 ನಿಮಿ |
| 11 | ವ್ಯಾಘ್ರಗೀ | ಗ್ರಹಿ | ವಿವರಿಸು | 2 | ಕಿರು ಉತ್ತರ 2 | ಸುಲಭ | 3 ನಿಮಿ |
| 12 | ವೃಕ್ಷಸಾ | ಗ್ರಹಿ | ಉಲ್ಲೇಖಿಸುವ | 2 | ಕಿರು ಉತ್ತರ 2 | ಸಾಧಾ | 3 ನಿಮಿ |
| 13 | ಸುಕುಮಾರಸ್ವಾ ಕ | ಗ್ರಹಿ | ಕಾ ನೀಡುವ | 2 | ಕಿರು ಉತ್ತರ 2 | ಸಾಧಾ | 3 ನಿಮಿ |
| 14 | ವೀರಲ | ಗ್ರಹಿ | ವಿವರಿಸು | 2 | ಕಿರು ಉತ್ತರ 2 | ಸಾಧಾ | 3 ನಿಮಿ |
| 15 | ಕಮ ಮೀಸವೊತ್ತ | ಗ್ರಹಿ | ಕಾ ನೀಡುವ | 2 | ಕಿರು ಉತ್ತ 2 | ಸಾಧಾ | 4 ನಿಮಿ |
| 16 | ವಿವೇಕಾನಂ ಚಿಂತನಗ | ಅಭಿವ್ಯ | ಕಾ ನೀಡುವ | 2 | ಕಿರು ಉತ್ತ 2 | ಸಾಧಾ | 4 ನಿಮಿ |
| 17 | ಭಗತ ಸಿಂ | ಗ್ರಹಿ | ಪ ಹಚ್ಚುವ | 2 | ಕಿರು ಉತ್ತ 2 | ಕಠಿ | 4 ನಿಮಿ |
| 18 | ಮೃತ ಮತ್ತು ಸುಂದ | ಅಭಿವ್ಯ | ಪಟ್ಟಿ ಮಾಡುವರು | 2 | ಕಿರು ಉತ್ತ 2 | ಸುಲಭ | 4 ನಿಮಿ |
| 19 | ಒಗಟುಗ | ಗ್ರಹಿ | ವ್ಯಕ್ತಪಡಿಸುವರು | 2 | ಕಿರು ಉತ್ತ 2 | ಸಾಧಾ | 4 ನಿಮಿ |
| 20 | ಯುದ್ಧ | ಅಭಿವ್ಯ | ಸಂದರ್ಭ ವಿವರಿಸು | 3 | ದೀ ಉತ್ತ 1 | ಸಾಧಾ | 5 ನಿಮಿ |
| 21 | ಎದ ಬಿದ್ದ ಅಕ್ಷ | ಅಭಿವ್ಯ | ಸಂದರ್ಭ ವಿವರಿಸು | 3 | ದೀ ಉತ್ತ 1 | ಸಾಧಾ | 5 ನಿಮಿ |
| 22 | ಹಕ್ಕಿ ಹಾರುತ ನೋಡಿದಿ | ಅಭಿವ್ಯಕ್ತಿ | ಸಂದ ವಿವರಿಸು | 3 | ದೀ ಉತ್ತ 1 | ಸಾಧಾ | 5 ನಿಮಿ |
| 23 | ಹಲಗ ಬೇಡರ | ಅಭಿವ್ಯಕ್ತಿ | ಸಂದ ವಿವರಿಸು | 3 | ದೀ ಉತ್ತ 1 | ಸಾಧಾ | 5 ನಿಮಿ |
| 24 | ಶಬ | ಗ್ರಹಿ | ಪಟ್ಟಿ ಮಾಡು | 3 | ದೀ ಉತ್ತ 1 | ಸಾಧಾ | 5 ನಿಮಿ |
| 25 | ಹಸುರು | ಗ್ರಹಿ | ಪಟ್ಟಿ ಮಾಡು | 3 | ದೀ ಉತ್ತ 1 | ಸಾಧಾ | 5 ನಿಮಿ |
| 26 | ಛಲವ ಮರೆವ | ಸ್ಮ | ಸ್ಮರಿಸುವ | 4 | ದೀ ಉತ್ತ 2 | ಸಾಧಾ | 5 ನಿಮಿ |
| 27 | ಕೌರವೇಂದ್ರ ಕೊಂದೆ ನೀನು | ಪ್ರಶಂ | ಸಾರಾ ರಚಿಸುವ | 4 | ದೀ ಉತ್ತ 2 | ಸಾಧಾ | 5 ನಿಮಿ |
| 28 | ಭಾಗ್ಯಶಿಲ್ಪಿಗಳು | ಅಭಿವ್ಯ | ವಿವರಿಸು | 4 | ದೀ ಉತ್ತ 2 | ಕಠಿ | 5 ನಿಮಿ |
| 29 | ಸಂಕಲ್ಪ ಗೀತೆ | ಅಭಿವ್ಯ | ವಿವರಿಸು | 4 | ದೀ ಉತ್ತ 2 | ಕಠಿ | 5 ನಿಮಿ |
| 30 | ಅಪರಿತ ಗದ್ಯ | ಗ್ರಹಿ | ವಿವರಿಸು | 4 | ದೀ ಉತ್ತ 2 | ಸಾಧಾ | 5 ನಿಮಿ |
| 31-40 | ವ್ಯಾಕರಣ | ಸ್ಮ | ಸ್ಮರಿಸುವ | 1 | ವಸ್ತು ನಿಷ್ಠ | ಸುಲಭ | 10 ನಿಮಿ |
| 41-42 | ವ್ಯಾಕರಣ | ಸ್ಮ | ಸ್ಮರಿಸುವ | 1 | ವಸ್ತು ನಿಷ್ಠ | ಸುಲಭ | 5 ನಿಮಿ |
| 43-44 | ವ್ಯಾಕರಣ | ಗ್ರಹಿ | ಪಟ್ಟಿ ಮಾಡು | 1 | ವಸ್ತು ನಿಷ್ಠ | ಸುಲಭ | 5 ನಿಮಿ |
| 45 | ಛಂದಸ್ಸು | ಗ್ರಹಿ | ಗ್ರಹಿಸಿ ಜೋಡಿಸು | 3 | ದೀ ಉತ್ತ 2 | ಸಾಧಾ | 5 ನಿಮಿ |
| 46 | ಅಲಂ | ಗ್ರಹಿ | ಗ್ರಹಿಸಿ ಹೊಂದಿಸು | 3 | ದೀ ಉತ್ತ 2 | ಸಾಧಾ | 5 ನಿಮಿ |
| 47 | ಗಾ ವಿಸ್ತರ | ಗ್ರಹಿ | ವಿಸ್ತರಿಸುವ | 3 | ದೀ ಉತ್ತ 2 | ಸುಲಭ | 5 ನಿಮಿ |
| 48 | ಪತ್ರ ರಚನ | ಅಭಿವ್ಯ | ಪತ್ರ ರಚಿಸುವ | 5 | ದೀ ಉತ್ತ 3 | ಕಠಿ | 10 ನಿಮಿ |
| 49 | ಪ್ರಬಂ ರಚನ | ಅಭಿವ್ಯ | ಪ್ರಬಂ ರಚಿಸುವ | 5 | ದೀ ಉತ್ತ 3 | ಕಠಿ | 10 ನಿಮಿ |

# ಹತ್ತನೆಯ ತರಗತಿ ಮಾದರಿ ವಾರ್ಷಿಕ ಪ್ರಶ್ನೆ ಪತ್ರಿಕೆ –2

**ಅಂಕಗಳು: 100** **ವಿಷಯ: ಪ್ರಥಮ ಭಾಷೆ ಕನ್ನಡ** **ಸಮಯ: 3:00 ಗಂಟೆ**

**ಭಾಗ – 'ಎ' (ಗದ್ಯ, ಪದ್ಯ, ಪೋಷಕ ಅಧ್ಯಯನ, ಅಪಠಿತ ಗದ್ಯ)**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:** **9 x 1 = 9**

1. ಗಡಿ ಪ್ರದೇಶದಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?
2. ರಾಮ–ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರಾರು?
3. ಮನೆ ಮಂಚಮ್ಮನ ಕತೆ ಹೇಳಿದ ಕವಿ ಯಾರು?
4. ಹುಲಿಗೆ ಪರಮಾನಂದವಾಗಲು ಕಾರಣವೇನು?
5. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
6. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?
7. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?
8. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?
9. ಅಮ್ಮ ಎಲ್ಲಿ ಮಲಗಿದ್ದಾಳೆ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

10. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?
11. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?
12. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?
13. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು?
14. ಹಲಗಲಿಗೆ ದಂಡು ಬರಲು ಕಾರಣವೇನು?
15. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?
16. ಸರ್ವಧರ್ಮ ಸಮ್ಮೇಳನವು ಎಲ್ಲಿ? ಯಾವಾಗ ನಡೆಯಿತು?
17. ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಏನು?
18. ಮೃಗದ ಬಗೆಗೆ ಸುಂದರಿಯ ಮನ ಕರಗುತ್ತಿತ್ತು. ಏಕೆ? ವಿಶ್ಲೇಷಿಸಿ.
19. ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:** **4 x 3 = 12**

20. "ಹೊತ್ತು! ಹೊತ್ತು! ಹೊತ್ತೇ ಹಣ"
21. "ಆವಂತಿ ಸುಕುಮಾರನೆಂದು ಪೆಸರನಿಟ್ಟಂ"
22. "ಹಸುರಾದುದು ಕವಿಯಾತ್ಮಂ"
23. "ಎಂತು ನಾಣಿಲಿಗರಪ್ಪರೆ ಮಾನಸರ್"

**ಈ ಕೆಳಗಿನ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ:**

24. ಪು.ತಿ.ನ **2 x 3 = 6**
25. ಜಿ.ಎಸ್.ಶಿವರುದ್ರಪ್ಪ

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ:** **1 x 4 = 4**

26. ನೀಲಮೇಘ____________
________________
________________
________________
ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗಯುಗಗಳ____________
________________
________________
________________
ಹಕ್ಕಿ ಹಾರುತಿದೆ ನೋಡಿದಿರಾ?

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ:** **1 x 4 = 4**

27. ನೆಲಕಿಕೆವೆನೆಂದು ಬಗೆದಿರ ।
ಚಲಕಿಜೆವೆಂ ಪಾಂಡುಸುತರೊಳೀನೆಲನಿದು ಪಾ॥
ಟ್ಸೆಲನೆನಗೆ ದಿನಪಸುತನಂ ।
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಟ್ಟಪೆನೇ॥

ರವಿಕುಮಾರ್: 8050557779

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **2 x 4 = 8**

28. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 'ಮೈಸೂರು ಮಾದರಿ ರಾಜ್ಯ' ಹೇಗಾಯಿತು?

**ಅಥವಾ**

ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

29. ಕರ್ಣನಿಗೆ ಶ್ರೀ ಕೃಷ್ಣನು ಒಡ್ಡಿದ ಆಮಿಷಗಳೇನು?

**ಅಥವಾ** ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:** **2 + 2 = 4**

ಹನ್ನೆರಡನೇ ಶತಮಾನಕ್ಕಿಂತ ಮುಂಚೆ ಸಮಾಜದಲ್ಲಿದ್ದ ಶೋಷಣೆ, ಅಸತ್ಯ, ಅಧರ್ಮ, ಜಾತೀಯತೆ, ಮೇಲು–ಕೀಳೆಂಬ ಸಾಮಾಜಿಕ ಕಟ್ಟುಪಾಡುಗಳು ಜೀವಂತವಾಗಿದ್ದವು. ಅಸ್ಪೃಶ್ಯತೆ ತಾಂಡವವಾಡುತ್ತಿತ್ತು. ಇದನ್ನು ತಪ್ಪಿಸಿ ಬಸವಣ್ಣನವರು ತಮ್ಮ ವಚನಗಳಲ್ಲಿ ಸತ್ಯ, ಧರ್ಮ, ನ್ಯಾಯ, ಸದಾಚಾರ, ಸದ್ಭಕ್ತಿ, ಸಚ್ಚಾರಿತ್ರ್ಯಗಳನ್ನು ಜನಸಾಮಾನ್ಯರಿಗೆ ಬೋಧಿಸಿ ಜೀವನ ಮೌಲ್ಯಗಳನ್ನು ಕಟ್ಟಿಕೊಟ್ಟರು. ಸಮಾಜದ ಅಸಮಾನತೆಯನ್ನು ತೊಡೆದು ಸಮಾನತೆಯನ್ನು ಬಿತ್ತಿದ ಮಹಾಪುರುಷರಲ್ಲಿ ಬಸವಣ್ಣನವರು ಅಗ್ರಮಾನ್ಯರು.

ವ್ಯಕ್ತಿ ಶುದ್ಧವಾಗದೆ ಸಮಾಜ ಶುದ್ಧವಾಗುವುದಿಲ್ಲ ನಮ್ಮ ಅಂತರಂಗ ಬಹಿರಂಗಗಳೆರಡೂ ಶುದ್ಧಿಯಾಗಬೇಕು. ಆಡಂಬರದ ಬದುಕನ್ನು ಕೂಡಲಸಂಗಮದೇವ ಮೆಚ್ಚುವುದಿಲ್ಲ.

**30. ಪ್ರಶ್ನೆಗಳು:** ಅ) ಬಸವಣ್ಣನವರು ಹೇಳಿದ ಜೀವನ ಮೌಲ್ಯಗಳನ್ನು ತಿಳಿಸಿ.

ಆ) ವ್ಯಕ್ತಿ ಸಮಾಜವನ್ನು ಕುರಿತು ಬಸವಣ್ಣನವರು ಹೇಳಿದ ವಿಚಾರಗಳನ್ನು ಬರೆಯಿರಿ.

## ಭಾಗ – 'ಬಿ' (ವ್ಯಾಕರಣ, ಛಂದಸ್ಸು, ಅಲಂಕಾರ)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ:** **10 x 1 = 10**

31. ಇವುಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆಯಾಗುವ ಪದ

ಎ) ಅಪ್ಪ ಬಿ) ಕಜ್ಜ ಸಿ) ಉಷ್ಣ ಡಿ) ಅಕ್ಕ

32. ಕೋಟ್ಯಧೀಶ್ವರ – ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಎ) ಗುಣ ಸಂಧಿ ಬಿ) ಯಣ್ ಸಂಧಿ ಸಿ) ವೃದ್ಧಿ ಸಂಧಿ ಡಿ) ಸವರ್ಣದೀರ್ಘ ಸಂಧಿ

33. 'ತಿಂದನು' ಎಂಬುದು ಈ ಪುರುಷವಾಚಕ ಪದವಾಗಿದೆ.

ಎ) ಉತ್ತಮ ಬಿ) ಪ್ರಥಮ(ಅನ್ಯ) ಸಿ) ಮಧ್ಯಮ ಡಿ) ಅಂತಿಮ

34. ಒಂದು ಅಭಿಪ್ರಾಯದ ವಿವರಣೆ ಇಂತಿದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಲೇಖನ ಚಿಹ್ನೆ ಬಳಸಬೇಕು.

ಎ) ಆವರಣ ಚಿಹ್ನೆ ಬಿ) ಉದ್ಧರಣ ಚಿಹ್ನೆ ಸಿ) ಭಾವಸೂಚಕ ಚಿಹ್ನೆ ಡಿ) ವಿವರಣಾತ್ಮಕ ಚಿಹ್ನೆ

35. ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು ಈ ವಿಧದ ವಾಕ್ಯವೆಂದು ಹೇಳುವರು.

ಎ) ಸಂಯೋಜಿತ ವಾಕ್ಯ ಬಿ) ಸಾಮಾನ್ಯ ವಾಕ್ಯ ಸಿ) ಮಿಶ್ರ ವಾಕ್ಯ ಡಿ) ಸರಳ ವಾಕ್ಯ

36. 'ನೆಯ್ದ ವಸ್ತ್ರ' ಇದನ್ನು ವಿಗ್ರಹ ವಾಕ್ಯ ಮಾಡಿದಾಗ ಈ ರೂಪು ಪಡೆಯುತ್ತದೆ.

ಎ) ನೆಯ್ದುದು+ವಸ್ತ್ರ ಬಿ) ನೇಯ್ದ+ ವಸ್ತ್ರ ಸಿ) ನೆಯ್ + ವಸ್ತ್ರ ಡಿ) ನೆಯ್ಯು+ವಸ್ತ್ರ

37. 'ಕನ್ನಡತಿ' ಇಲ್ಲಿ ಬಳಸಲಾಗಿರುವ ವ್ಯಾಕರಣ ರೂಪ ಇದಾಗಿದೆ.

ಎ) ತದ್ಧಿತಾಂತ ಭಾವನಾಮ ಬಿ) ತದ್ಧಿತಾಂತ ನಾಮ ಸಿ) ತದ್ಧಿತಾಂತಾವ್ಯಯ ಡಿ) ಕೃದಂತಾವ್ಯಯ

38. 'ಮರಭನಯಯಯ' ಗಣವಿನ್ಯಾಸ ಬರುವ ಖ್ಯಾತಕರ್ಣಾಟಕ ವೃತ್ತ

ಎ) ಚಂಪಕಮಾಲಾ ವೃತ್ತ ಬಿ) ಶಾರ್ದೂಲ ವಿಕ್ರೀಡಿತ ಸಿ) ಮಹಾಸ್ರಗ್ಧರಾ ವೃತ್ತ ಡಿ) ಸ್ರಗ್ಧರಾವೃತ್ತ

39. ಆತ್ಮಾರ್ಥಕ ಸರ್ವನಾಮ ಪದ ಇದಾಗಿದೆ.

ಎ) ತಾವು ಬಿ) ಅವನು ಸಿ) ಅದು ಡಿ) ನೀನು

40. 'ಅದುವೇ' ಎಂಬುದು ಈ ಅವ್ಯಯ ಪದವಾಗಿದೆ.

ಎ) ಸಂಬಂಧಾರ್ಥಕಾವ್ಯಯ ಬಿ) ಕ್ರಿಯಾರ್ಥಕಾವ್ಯಯ ಸಿ) ಅವಧಾರಣಾರ್ಥಕಾವ್ಯಯ ಡಿ)ಸಾಮಾನ್ಯಾವ್ಯಯ

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ:**

41. ಬಸ್ಸು : ಇಂಗ್ಲೀಷ್ : : ಚೌಕಾಷಿ : ____________ **2 x 4 = 8**

42. ದ್ಯೂತ : ಜೂಜು : : ಯುದ್ಧ : ____________

43. ಸತಿಪತಿ : ಜೋಡುನುಡಿ : : ಮೊದಮೊದಲು : : ____________

44. ಉರ್ವಿ : ಭೂಮಿ : : ವಾಜಿ : ____________

**45. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ:** **1 x 3 = 3**

ನಿನಗೆ ಹಸ್ತಿನಪುರದ ರಾಜ್ಯದ

ಘನತೆಯನು ಮಾಡುವೆನು ಪಾಂಡವ

ಜನಪ ಕೌರವ ಜನಪರೋಲೈಸುವರು ಗದ್ದುಗೆಯ

**ಅಥವಾ**

ಕಾದದಿರೆನಜ್ಜ ಪಾಂಡವ

ರಾದರ್ ಮೇಣಿಂದಿನೊಂದೆ ಸಮರದೊಳಾಂ ಮೇ

**46. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಡನೆ ಬರೆದು ಸಮನ್ವಯಗೊಳಿಸಿ:**

ನೀಚರಿಗೆ ಮಾಡುವ ಉಪಕಾರ ಹಾವಿಗೆ ಹಾಲೆರೆದಂತೆ **1 x 3 = 3**

**ಅಥವಾ**

ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ

**ಭಾಗ – 'ಸಿ' (ವಾಕ್ಯರಚನೆ)**

**47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೊಂದನ್ನು ವಿಸ್ತರಿಸಿ ಬರೆಯಿರಿ:** **1 x 3 = 3**

* ಮಾತೇ ಮುತ್ತು; ಮಾತೇ ಮೃತ್ಯು
* ದೇಶ ಸುತ್ತಿ ನೋಡು; ಕೋಶ ಓದಿ ನೋಡು
* ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?

**48. ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ರವೀಂದ್ರ /ರವೀನಾ ಎಂದು ಭಾವಿಸಿಕೊಂಡು** **1 x 5 = 5**

ನಿಮ್ಮ ಶಾಲೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆ ವರದಿಯನ್ನು ಪ್ರಕಟಿಸುವಂತೆ ಕೋರಿ ಹಾಸನದ ಕನ್ನಡ ಪ್ರಭ ಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ.

**ಅಥವಾ**

**ನಿಮ್ಮನ್ನು ಮಡಿಕೇರಿ ನಗರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಸುಚಿತ್ರಾ / ಸುಚೇತ್ ಎಂದು ಭಾವಿಸಿಕೊಂಡು**

ಮೈಸೂರಿನಲ್ಲಿರುವ ನಿಮ್ಮ ಸ್ನೇಹಿತರಾದ ವಸಂತ ಎಂಬುವವರಿಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ತಿಳಿಸಿ ಒಂದು ಪತ್ರ ಬರೆ.

**49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

* ರಾಷ್ಟ್ರೀಯ ಹಬ್ಬಗಳ ದಿನಾಚರಣೆ ಮತ್ತು ಅವುಗಳ ಮಹತ್ವ **1 x 5 = 5**
* ದೇಶದ ಅಭಿವೃದ್ಧಿಯಲ್ಲಿ ಸಾಕ್ಷರರ ಪಾತ್ರ
* ಭಾರತದ ಸ್ವಚ್ಛತೆಗೆ ನಾನೇನು ಮಾಡುವೆ?

ಶಿಕ್ಷಕ 8050557779

# ಹತ್ತನೆಯ ತರಗತಿ ಮಾದರಿ ವಾರ್ಷಿಕ ಪ್ರಶ್ನೆ ಪತ್ರಿಕೆ –3

**ಅಂಕಗಳು: 100** **ವಿಷಯ: ಪ್ರಥಮ ಭಾಷೆ ಕನ್ನಡ** **ಸಮಯ: 3:00 ಗಂಟೆ**

---

**ಭಾಗ – 'ಎ' (ಗದ್ಯ, ಪದ್ಯ, ಪೋಷಕ ಅಧ್ಯಯನ, ಅಪಠಿತ ಗದ್ಯ)**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:** **9 x 1 = 9**

1. ಶಬರಿ ಗೀತನಾಟಕದ ಕರ್ತೃ ಯಾರು?
2. ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?
3. ಅಶೋಕ ಪೈ ಅವರ ವೃತ್ತಿ ಯಾವುದು?
4. ಶ್ಯಾನುಭೋಗರ ತಲೆ ಸುತ್ತಲು ಕಾರಣವೇನು?
5. ದುಷ್ಟಬುದ್ಧಿಯ ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದರು?
6. ಹಲಗಲಿ ಗ್ರಾಮ ಎಲ್ಲಿದೆ?
7. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ?
8. ಲವನು ಕುದುರೆಯನ್ನು ಅವನು ಯಾವುದರಿಂದ ಕಟ್ಟಿದನು?
9. ಪುಟ್ಟಿಯ ಪ್ರಶ್ನೆಗಳೇನು?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

10. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
11. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.
12. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?
14. ಹಲಗಲಿಯ ಬೇಡರು ದಂಗೆ ಏಳಲು ಕಾರಣಗಳೇನು?
15. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿ ಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.
16. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?
17. ಭಗತ್‌ಸಿಂಗ್ ಹುತಾತ್ಮನಾದದ್ದು ಯಾವಾಗ?
18. ಮೃಗದ ಬಾಹ್ಯ ಆಕಾರ ಹೇಗಿತ್ತು?
19. ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ಒಗಟುಗಳು ಹೇಗೆ ವಿವರಿಸುತ್ತವೆ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:** **4 x 3 = 12**

20. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"
21. "ನಮ್ಮನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು"
22. "ಬೇರೆ ಬಣ್ಣವನೆ ಕಾಣೆ"
23. "ವಿದ್ಯಾಧನಮೆ ಧನಮಪ್ಪುದು"

**ಈ ಕೆಳಗಿನ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ:**

24. ಪು.ತಿ.ನರಸಿಂಹಾಚಾರ್
25. ದ.ರಾ.ಬೇಂದ್ರೆ

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ:** **1 x 4 = 4**

26.

| | | |
|---|---|---|
| ಮಾರಿಗೌತಣವಾಯ್ತು ನಾಳಿನ | | ಕೊರಳಸೆರೆ ಹಿಗ್ಗಿದವು ದೃಗುಜಲ |
| ______________________ | **ಅಥವಾ** | ______________________ |
| ______________________ | | ______________________ |
| ______________________ | | ______________________ |
| ______________________ | | ______________________ |
| ವೀರರ್ರೈವರ ನೋಯಿಸೆನು ರಾಜೀವಸಖನಾಣೆ | | ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ |

8050557779

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ: 1 x 4 = 4**

27. ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ: 2 x 4 = 8**

28. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 'ಮೈಸೂರು ಮಾದರಿ ರಾಜ್ಯ' ಹೇಗಾಯಿತು?

**ಅಥವಾ**

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯನವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

29. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ದುರ್ಯೋಧನನ ಛಲದ ಗುಣ ಮತ್ತು ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ: 2 + 2 = 4**

ಸ್ವಾತಂತ್ರ್ಯಪೂರ್ವದಲ್ಲೂ ಸ್ವಾತಂತ್ರ್ಯ ಬಂದ ಆರಂಭದಲ್ಲೂ ಪಾಶ್ಚಿಮಾತ್ಯರು ಭಾರತಕ್ಕೆ ಮನ್ನಣೆ ನೀಡುತ್ತಿರಲಿಲ್ಲ. ಭಾರತದ ವಿಷಯದಲ್ಲಿ ಪಾಶ್ಚಾತ್ಯರಿಗಿದ್ದ ಈ ಕಲ್ಪನೆಯನ್ನು ತೊಡೆದು ಹಾಕಿ ಅದರ ಸ್ಥಾನದಲ್ಲಿ ನ್ಯಾಯಸಮ್ಮತವಾದ ಬೇರೊಂದು ಕಲ್ಪನೆಯನ್ನಿಡುವುದು ಅವಶ್ಯವಾಗಿತ್ತು. ಆ ಕೆಲಸವನ್ನು ಸ್ವಲ್ಪ ಮಟ್ಟಿಗಾದರೂ ರಾಧಾಕೃಷ್ಣನ್ ಅವರು ಮಾಡಿದರು. ಅವರ ಬರವಣಿಗೆಯ ಮೂಲಕ ಪಾಶ್ಚಾತ್ಯರಿಗೆ ಭಾರತೀಯ ಸಂಸ್ಕೃತಿಯ ಪರಿಚಯವಾಯಿತು. ಅಲ್ಲದೆ ಅವರು ಭಾರತದ ಪ್ರತಿನಿಧಿಯಾಗಿ ಇಂಗ್ಲೆಂಡ್, ಅಮೆರಿಕಾ ಮುಂತಾದ ದೇಶಗಳಿಗೆ ಹೋಗಿ ಭಾಷಣ ಮಾಡಿದಾಗ ಅವರ ವಾಕ್ಶಕ್ತಿಯೂ ತರ್ಕಬದ್ಧವಾದ ವಿಚಾರ ಸರಣಿಯೂ ಎಲ್ಲರನ್ನೂ ಬೆರಗುಗೊಳಿಸಿತು. ಅವರ ಭಾಷಣ ಕೇಳಿದ ಅಲ್ಲಿನ ಜನ ಮಂತ್ರಮುಗ್ದರಾಗಿ ಯಾರ ಪ್ರೇರಣೆಯೂ ಇಲ್ಲದೆ, ಎದ್ದು ನಿಂತು ಜಯಕಾರ ಮಾಡಿ ಗೌರವ ಸೂಚಿಸಿದರು.

**30. ಪ್ರಶ್ನೆಗಳು:** ಅ) ಜನರು ಎದ್ದು ನಿಂತು ಜಯಕಾರ ಮಾಡಿ ಗೌರವ ಸೂಚಿಸಲು ಕಾರಣವೇನು?

ಆ) ಭಾರತದ ವಿಷಯದಲ್ಲಿ ಪಾಶ್ಚಾತ್ಯರಿಗಿದ್ದ ಕಲ್ಪನೆ ಏನು?

## ಭಾಗ – 'ಬಿ' (ವ್ಯಾಕರಣ, ಛಂದಸ್ಸು, ಅಲಂಕಾರ)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ: 10 x 1 = 10**

31. 'ತ' ವರ್ಗದ ಅನುನಾಸಿಕಾಕ್ಷರ ಇದು

ಎ) ಮ ಬಿ) ನ ಸಿ) ಙ ಡಿ) ಞ

32. ಅನ್ವರ್ಥನಾಮಕ್ಕೆ ಉದಾಹರಣೆ ಇದು

ಎ) ಬೆಟ್ಟ ಬಿ) ರಾಮ ಸಿ) ವಿದ್ವಾಂಸ ಡಿ) ಅವನು

33. ದ್ವಿತೀಯಾ ವಿಭಕ್ತಿಯ ಕಾರಕಾರ್ಥ

ಎ) ಕರ್ಮಾರ್ಥ ಬಿ) ಸಂಪ್ರದಾನ ಸಿ) ಅವಧಾರಣಾರ್ಥ ಡಿ) ಕರ್ತರ್ಥ

34. ಅವನು ಒಳಗೆ ಊಟ ಮಾಡುವನು. ಈ ವಾಕ್ಯವನ್ನು ವರ್ತಮಾನ ಕಾಲಕ್ಕೆ ಪರಿವರ್ತಿಸಿದಾಗ ಆಗುವ ರೂಪ

ಎ) ಅವನು ಒಳಗೆ ಊಟ ಮಾಡಿದನು ಬಿ) ಅವನು ಒಳಗೆ ಊಟ ಮಾಡುತ್ತಾನೆ

ಸಿ) ಅವನು ಒಳಗೆ ಊಟ ಮಾಡಿದ ಡಿ) ಅವನು ಒಳಗೆ ಊಟ ಮಾಡುವನು

35. ಜಾತ್ಯಾತೀತ ಪದದಲ್ಲಿರುವ ಸಂಧಿ

ಎ) ಜಶ್ತ್ವಸಂಧಿ ಬಿ) ಶ್ಚುತ್ವಸಂಧಿ ಸಿ) ಗುಣಸಂಧಿ ಡಿ) ಯಣ್ ಸಂಧಿ

36. ಸೂರ್ಯಚಂದ್ರರು– ಈ ಪದದಲ್ಲಿರುವ ಸಮಾಸ

ಎ) ದ್ವಂದ್ವ ಸಮಾಸ ಬಿ) ಬಹುವ್ರೀಹಿ ಸಮಾಸ ಸಿ) ಗಮಕ ಸಮಾಸ ಡಿ) ಅಂಶಿ ಸಮಾಸ

37. ಹುಕುಂ – ಪದವು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ.

ಎ) ಗ್ರೀಕ್ ಬಿ) ಉರ್ದು ಸಿ) ಸಂಸ್ಕೃತ ಡಿ) ಹಿಂದೂಸ್ಥಾನಿ

38. ಕುಠಾರ – ಪದದ ತದ್ಭವ ರೂಪ

ಎ) ಕೊಡಲಿ ಬಿ) ಕುಠೀರ ಸಿ) ಕೂಡು ಡಿ) ಕುಂಡಲಿ

39. ಅದೇ ನನ್ನ ಪುಸ್ತಕ – ಈ ವಾಕ್ಯದಲ್ಲಿರುವ ಅವ್ಯಯದ ವಿಧ

ಎ) ಸಂಬಂಧಾರ್ಥಕಾವ್ಯಯ ಬಿ) ಕ್ರಿಯಾರ್ಥಕಾವ್ಯಯ ಸಿ) ಅವಧಾರಣಾರ್ಥಕಾವ್ಯಯ ಡಿ)ಸಾಮಾನ್ಯಾವ್ಯಯ

40. ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಬಳಸುವ ಚಿಹ್ನೆ

ಎ) ಪೂರ್ಣ ವಿರಾಮ ಬಿ) ಅರ್ಧವಿರಾಮ ಸಿ) ಅಲ್ಪವಿರಾಮ ಡಿ) ಭಾವಸೂಚಕ

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ:**

**4 x 1 = 4**

41. ಮಾಡಿದ : ಕೃದಂತ ನಾಮ : : ಬಳೆಗಾರ : ____________
42. ಮೊತ್ತಮೊದಲು : ದ್ವಿರುಕ್ತಿ : : ಹಾಲ್ಜೇನು : ____________
43. ಇಸವಾಸ : ವಿಶ್ವಾಸ : : ಹೀಂಗ : ____________
44. ಮಾಡಲಿ : ವಿಧ್ಯರ್ಥಕ : : ಮಾಡೀಯೆ : ____________

**45. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ: 1 x 3 = 3**

ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ

**ಅಥವಾ**

ಬಲ್ಗಯ್ಯನೃಪರಂಜಿ ತಡೆಯದೆ ರಘೂದ್ವಹನ
ಸೊಲ್ಗೇಳಿ ನಮಿಸಲಿಳೆಯೊಳ್ ಚರಿಸುತದ್ವರದ
ನಲ್ಗುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೊಳು

**46. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಡನೆ ಬರೆದು ಸಮನ್ವಯಗೊಳಿಸಿ: 1 x 3 = 3**

ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು; ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೆ?

**ಅಥವಾ**

ಎನ್ನ ಬಗೆಗನಿವಾರ್ಯವೀ ಶೋಕದುಲ್ಕೆ

## ಭಾಗ – 'ಸಿ' (ವಾಕ್ಯರಚನೆ)

**47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೊಂದನ್ನು ವಿಸ್ತರಿಸಿ ಬರೆಯಿರಿ: 1 x 3 = 3**

* ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ
* ತಾಳಿದವನು ಬಾಳಿಯಾನು
* ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು

**48. ನಿಮ್ಮನ್ನು ಅರಸೀಕೆರೆಯ ಸರ್ಕಾರಿ ಪ್ರೌಢಶಾಲೆಯ ಸುಮಂತ ಎಂದು ಭಾವಿಸಿಕೊಂಡು 1 x 5 = 5**

ನಿಮ್ಮ ಶಾಲೆಯಲ್ಲಿ ನಡೆಯುವ ವಾರ್ಷಿಕೋತ್ಸವದಲ್ಲಿ ಪಾಲ್ಗೊಳ್ಳುವಂತೆ ಆಹ್ವಾನಿಸಿ ಮಂಗಳೂರಿನಲ್ಲಿರುವ ನಿಮ್ಮ ತಂದೆಗೆ ಪತ್ರ ಬರೆಯಿರಿ.

**ಅಥವಾ**

**ನಿಮ್ಮನ್ನು ವಿಜಯಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಸುಹಾಸ್ ಎಂದು ಭಾವಿಸಿಕೊಂಡು**

ನಿಮ್ಮ ಊರಿನಲ್ಲಿ ನಡೆಯುವ ಜಾತ್ರೆಗೆ ಹೋಗಲು ಅನುಮತಿ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರ ಬರೆ.

**49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

**1 x 5 = 5**

* ಸ್ವಚ್ಛಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ
* ರಾಷ್ಟ್ರೀಯ ಭಾವೈಕ್ಯತೆ
* ಸಾಮಾಜಿಕ ಪಿಡುಗುಗಳು

8050557779

# ಹತ್ತನೆಯ ತರಗತಿ ಮಾದರಿ ವಾರ್ಷಿಕ ಪ್ರಶ್ನೆ ಪತ್ರಿಕೆ –4

**ಅಂಕಗಳು: 100** **ವಿಷಯ: ಪ್ರಥಮ ಭಾಷೆ ಕನ್ನಡ** **ಸಮಯ: 3:00 ಗಂಟೆ**

**ಭಾಗ – 'ಎ' (ಗದ್ಯ, ಪದ್ಯ, ಪೋಷಕ ಅಧ್ಯಯನ, ಅಪಠಿತ ಗದ್ಯ)**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:** **9 x 1 = 9**

1. ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಿಸಿದವರು ಯಾರು?
2. ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?
3. ದೇವನೂರರ 'ನನ್ನ ದೇವರು' ಯಾರು?
4. ಭಗವದ್ಗೀತೆಯನ್ನು ರಚಿಸಿದವರು ಯಾರು?
5. ಯಶೋಭದ್ರೆಯು ರತ್ನಗಂಬಳಿಗಳನ್ನು ಯಾರಿಗೆ ಕೊಟ್ಟಳು?
6. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?
7. ದಿನಪಸುತ ಎಂದರೆ ಯಾರು?
8. ಲವನು ಕುದುರೆಯನ್ನು ಯಾವುದರಿಂದ ಕಟ್ಟಿದನು?
9. ಯಾರಿಗೆ ವಸಂತ ಮುಖ ತೋರಲಿಲ್ಲ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

10. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?
11. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೇನು? ವಿವರಿಸಿ.
12. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?
13. ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು?
14. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳಾವುವು?
15. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.
16. ಜಾತಿ ವ್ಯವಸ್ಥೆಯು ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?
17. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?
18. ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಏನು?
19. ಬಡತನ ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ. ಏಕೆ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:** **4 x 3 = 12**

20. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"
21. "ಹುಸಿಯದ ಬೇಹಾರಿಯೇ ಇಲ್ಲ"
22. "ಜೀವ ಸತ್ತು ಹೋಗುವುದು ಗೊತ್ತೆ"
23. "ಪಾಂಡವರೊಳಿಡಿದು ಛಲಮನೆ ಮೆರೆವೆಂ"

**ಈ ಕೆಳಗಿನ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ:**

24. ವಿ.ಕೃ.ಗೋಕಾಕ
25. ಪಂಪ

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ:** **1 x 4 = 4**

26. ಕಲುಷಿತವಾದೀ__________
____________________
____________________
______________ ಮುಟ್ಟೋಣ

**ಅಥವಾ**

ಮತಗಳೆಲ್ಲವು__________
____________________
____________________
______________ ಬಿತ್ತೋಣ

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ:** **1 x 4 = 4**

27. ಯುಗಯುಗಗಳ ಹಣೆ ಬರೆಹವ ಒರೆಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **2 x 4 = 8**

28. ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?

**ಅಥವಾ**

ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

29. ಕರ್ಣನಿಗೆ ಶ್ರೀ ಕೃಷ್ಣನು ಒಡ್ಡಿದ ಆಮಿಷಗಳೇನು?

**ಅಥವಾ**

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:** **2 + 2 = 4**

ಒಂದು ದಿನ ರಾಜೇಂದ್ರ ಪ್ರಸಾದರು ಮನೆಗೆ ಬಂದಾಗ ಅವರ ಒಂದು ಪುಸ್ತಕದ ಹಲವು ಪುಟಗಳು ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿ ಹರಿದು ಬಿದ್ದಿದ್ದವು. ಇದೆಲ್ಲ ಮಕ್ಕಳ ಕೆಲಸ ಎಂಬುದು ಅವರಿಗೆ ಹೊಳೆಯಲು ಹೆಚ್ಚು ವೇಳೆ ಬೇಕಾಗಲಿಲ್ಲ. ಮಕ್ಕಳಿಗೆ ತಮ್ಮ ತಪ್ಪಿನ ಅರಿವಾಗಬೇಕು ಎಂದೆನಿಸಿತು. ಆದರೆ ಆ ಮಕ್ಕಳನ್ನು ಅಪರಾಧಿಗಳಾಗಿಸಲು ಅವರ ಮನ ಒಪ್ಪಲಿಲ್ಲ. ಒಂದು ಉಪಾಯ ಹೂಡಿದರು.

ಕೈಕಾಲು ತೊಳೆದುಕೊಂಡು ಬಂದು ಹರಿದ ಪುಟಗಳನ್ನು ಎತ್ತಿ ಮೇಜಿನ ಮೇಲಿಟ್ಟರು. ಬಳಿಕ ಮಕ್ಕಳನ್ನು ಬಳಿಗೆ ಕರೆದರು. ರಾಜೇಂದ್ರಪ್ರಸಾದರು "ಮಕ್ಕಳೇ, ನೋಡಿ ಇಲ್ಲಿ ಎಷ್ಟೊಂದು ಕಾಗದಗಳು ಹರಿದು ಹೋಗಿವೆ. ಇವೆಲ್ಲ ಪುಸ್ತಕದ ಪುಟಗಳು. ನಿಮ್ಮಲ್ಲಿ ಯಾರು ಯಾರು ಎಷ್ಟು ಪುಟಗಳನ್ನು ಹರಿದಿದ್ದೀರೋ ಅವರಿಗೆ ಆ ಪುಟಗಳ ಸಂಖ್ಯೆಗನುಗುಣವಾಗಿ ಕಾಸು ಕೊಡುತ್ತೇನೆ. ಆಗಬಹುದೆ?" ಎಂದರು.

ಮಕ್ಕಳು ಮುಖ ಮುಖ ನೋಡಿಕೊಂಡು ಕಾಸು ಸಿಗುವ ಆಸೆಯಿಂದ ತಾವು ಹರಿದ ಪುಟಗಳ ಸಂಖ್ಯೆಯನ್ನು ತಿಳಿಸಿದರು. ಪ್ರಸಾದರು ಅವರಿಗೆ ಅಷ್ಟಷ್ಟು ಕಾಸು ಕೊಟ್ಟರು. ಮಕ್ಕಳಿಗೆ ಖುಷಿಯೋ ಖುಷಿ. ಆಗ ಪ್ರಸಾದರು "ನೋಡಿ ಮಕ್ಕಳೇ, ಪುಸ್ತಕಗಳು ಜ್ಞಾನ ಭಂಡಾರ. ತಮ್ಮ ತಿಳುವಳಿಕೆಯನ್ನು ಹೆಚ್ಚಿಸುವ ಆಕರಗಳು. ಪುಸ್ತಕದ ಪುಟಗಳನ್ನು ಹರಿಸು ಹಾಕುವುದು ಒಳ್ಳೆಯ ಅಭ್ಯಾಸವಲ್ಲ. ತಿಳಿಯಿತೆ?" ಎಂದು ಮಕ್ಕಳಿಗೆ ತಿಳಿಯುವಂತೆ ಹೇಳಿದರು.

**30. ಪ್ರಶ್ನೆಗಳು:** ಅ) ಪುಸ್ತಕಗಳ ಬಗೆಗೆ ರಾಜೇಂದ್ರ ಪ್ರಸಾದರು ಹೇಳಿದ ಒಳ್ಳೆಯ ಮಾತುಗಳೇನು?

ಆ) ಮಕ್ಕಳು ಹರಿದ ಪುಸ್ತಕಗಳ ಪುಟಗಳ ಸಂಖ್ಯೆಯನ್ನು ಪ್ರಸಾದರು ಹೇಗೆ ಪತ್ತೆ ಮಾಡಿದರು?

**ಭಾಗ – 'ಬಿ' (ವ್ಯಾಕರಣ, ಛಂದಸ್ಸು, ಅಲಂಕಾರ)**

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ:** **10 x 1 = 10**

31. ಕೆಳಗಿನವುಗಳಲ್ಲಿ ಮಹಾಪ್ರಾಣಾಕ್ಷರಗಳ ಗುಂಪು

ಎ) ಅಇಉಋಎಒ ಬಿ) ಆಈಊಏಓ ಸಿ) ಕಗಚಜಡಟ ಡಿ) ಖಘಛಝಥಧ

32. ಪರ್ವತ – ಈ ಪದದ ವಸ್ತುವಾಚಕದ ವಿಧ

ಎ) ರೂಢನಾಮ ಬಿ) ಅಂಕಿತನಾಮ ಸಿ) ಅನ್ವರ್ಥನಾಮ ಡಿ) ಭಾವನಾಮ

33. ಇವುಗಳಲ್ಲಿ ಅನ್ಯಪುರುಷ ಸರ್ವನಾಮ

ಎ) ನಾನು ಬಿ) ನೀನು ಸಿ) ಯಾವನು ಡಿ) ಅವನು

34. ಹಳಗನ್ನಡದ ಪಂಚಮಿ ವಿಭಕ್ತಿ ಪ್ರತ್ಯಯ

ಎ) ಮ್ ಬಿ) ಅತ್ತಣಿಂ ಸಿ) ಒಳ್ ಡಿ) ಇಂದಂ

35. ಇವುಗಳಲ್ಲಿ ಸಂಭವನಾರ್ಥಕ ಕ್ರಿಯಾಪದ

ಎ) ಬಂದಾನು ಬಿ) ಬಾರನು ಸಿ) ಬಾ ಡಿ) ಬರುವನು

36. ಜಗತ್+ಈಶ= ಜಗದೀಶ ಇದು ಯಾವ ಸಂಧಿಗೆ ಉದಾಹರಣೆ

ಎ) ಲೋಪ ಸಂಧಿ ಬಿ) ಗುಣಸಂಧಿ ಸಿ) ಯಣ್ ಸಂಧಿ ಡಿ) ಜಶ್ತ್ವಸಂಧಿ

37. ಆ ಕಲ್ಲು – ಈ ಪದವು ಯಾವ ಸಮಾಸಕ್ಕೆ ಉದಾಹರಣೆಯಾಗಿದೆ.

ಎ) ಗಮಕ ಬಿ) ತತ್ಪುರುಷ ಸಿ) ದ್ವಂದ್ವ ಡಿ) ಕ್ರಿಯಾ

38. ಈ ಕೆಳಗಿನ ಪದಗಳಲ್ಲಿ ಇಂಗ್ಲೀಷ್‌ನಿಂದ ಕನ್ನಡಕ್ಕೆ ಬಂದ ಪದ

ಎ) ಅಜಮಾಯಿಷಿ ಬಿ) ದಮ್ಮಡಿ ಸಿ) ರೈಲು ಡಿ) ಮೇಜು

39. ಸಂದೇಹ – ಈ ಪದ ತದ್ಭವ ರೂಪ

ಎ) ಸೆಣಬು ಬಿ) ಸಂಜೆ ಸಿ) ಸಂದೂಕ ಡಿ) ಸಂದೆಯ

40. ಈ ಕೆಳಗಿನ ಪದಗಳಲ್ಲಿ ಭಾವಸೂಚಕಾವ್ಯಯ ಪದ

ಎ) ನೆಟ್ಟಗೆ ಬಿ) ಅವನಂತೆ ಸಿ) ಅಯ್ಯೋ! ಡಿ) ಚುರುಚುರು

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ:**

41. ಬಾಬಾ : ದ್ವಿರುಕ್ತಿ : : ಬೆಟ್ಟಬೆಳ್ಳಾರ : ___________

42. ಸಮರ : ಯುದ್ಧ : : ಘೃತ : ___________

43. ಹೊಟಿಲ್ : ಪಟ್ಟಣ : : ಕಸವರ : ___________

44. ಗುರುಲಘು ಮೂರಿರೆ : ಮ ನ ಗಣ : : ಗುರುಲಘು ನಡುವಿರೆ : ___________

**45. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ:** **1 x 3 = 3**

ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ

**ಅಥವಾ**

ನಿಮಗೆ ಪೊಡಮಟ್ಟು ಪೋಪೀ
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ

**46. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಡನೆ ಬರೆದು ಸಮನ್ವಯಗೊಳಿಸಿ:** **1 x 3 = 3**

ಮಾರಿಗೌತಣವಾಯ್ತು ನಾಳಿನ ಭಾರತವು ಚತುರಂಗ ಬಲದಲಿ

**ಅಥವಾ**

ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು

**ಭಾಗ – 'ಸಿ' (ವಾಕ್ಯರಚನೆ)**

**47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೊಂದನ್ನು ವಿಸ್ತರಿಸಿ ಬರೆಯಿರಿ:** **1 x 3 = 3**

* ಮಾಡಿದ್ದುಣ್ಣೋ ಮಹಾರಾಯ
* ಕೈ ಕೆಸರಾದರೆ ಬಾಯಿ ಮೊಸರು
* ದೂರದ ಗುಡ್ಡ ಕಣ್ಣಿಗೆ ನುಣ್ಣಗೆ

**48. ನಿಮ್ಮನ್ನು ಅರಸೀಕೆರೆಯ ಸರ್ಕಾರಿ ಪ್ರೌಢಶಾಲೆಯ ರಾಜೇಶ / ರಾಣಿ ಎಂದು ಭಾವಿಸಿಕೊಂಡು** **1 x 5 = 5**

ನಿನ್ನ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೊಡುವಂತೆ ನಿಮ್ಮ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರ ಬರೆಯಿರಿ.

**ಅಥವಾ**

**ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ವಿಜಯ ಎಂದು ಭಾವಿಸಿಕೊಂಡು**

ನಿಮ್ಮ ಶಾಲೆಯಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವದ ವರದಿಯನ್ನು ಪ್ರಕಟಿಸುವಂತೆ ಕೋರಿ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರಿಗೆ ಒಂದು ಮನವಿ ಪತ್ರ ಬರೆಯಿರಿ.

**49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

**1 x 5 = 5**

* ಸಾಮಾಜಿಕ ಪಿಡುಗುಗಳು
* ಸಾಂಕ್ರಾಮಿಕ ರೋಗಗಳಿಗೆ ಕಾರಣ ಮತ್ತು ಪರಿಣಾಮಗಳು
* ಗ್ರಂಥಾಲಯಗಳ ಮಹತ್ವ

# ಹತ್ತನೆಯ ತರಗತಿ ಮಾದರಿ ವಾರ್ಷಿಕ ಪ್ರಶ್ನೆ ಪತ್ರಿಕೆ –5

**ಅಂಕಗಳು: 100** **ವಿಷಯ: ಪ್ರಥಮ ಭಾಷೆ ಕನ್ನಡ** **ಸಮಯ: 3:00 ಗಂಟೆ**

**ಭಾಗ – 'ಎ' (ಗದ್ಯ, ಪದ್ಯ, ಪೋಷಕ ಅಧ್ಯಯನ, ಅಪಠಿತ ಗದ್ಯ)**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:** **9 x 1 = 9**

1. ಲಕ್ಷ್ಮಣನ ಪ್ರಕಾರ ಸೀತೆಯನ್ನು ಯಾರು ರಕ್ಷಿಸುತ್ತಾರೆ?
2. ವೆಸ್ಟ್‌ಮಿನಿಸ್ಟರ್ ಅಬೆ ಯಾರ ಸ್ಮಾರಕವಾಗಿದೆ?
3. ರಾಹಿಲನು ತುರ್ತು ಪರಿಸ್ಥಿತಿಯ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?
4. ಸುಕುಮಾರಸ್ವಾಮಿಯ ತಂದೆ ತಾಯಿಗಳ ಹೆಸರೇನು?
5. ಧರ್ಮಾಧಿಕರಣರು ವಟವೃಕ್ಷದ ಸಮೀಪ ಏಕೆ ಬಂದರು?
6. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?
7. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?
8. ದ್ರುಪದನು ಪಡಿಯರನಿಗೆ ಏನೆಂದು ಹೇಳಿ ಕಳುಹಿಸಿದನು?
9. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

10. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?
11. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
12. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?
13. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾಧಿಯಿದೆ ಎಂದುಕೊಳ್ಳಲು ಕಾರಣವೇನು?
14. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?
15. ದ್ರುಪದನ ಮಾತಿಗೆ ದ್ರೋಣನ ಪ್ರತ್ಯುತ್ತರವೇನು?
16. ವಿವೇಕಾನಂದರು ಇಂದಿಗೂ ಸತ್ಯ. ಹೇಗೆ? ವಿವರಿಸಿ.
17. ಭಗತ್‌ಸಿಂಗ್ ವೀರಯೋಧನಾಗಿ ಅಮರನಾದ ಬಗೆ ಹೇಗೆ?
18. ಮೃಗವು ವರ್ತಕನಿಗೆ ಸಿಟ್ಟಿನಿಂದ ಅಬ್ಬರಿಸಿದ ಮಾತುಗಳೇನು?
19. ಜನಪದರು ಬೀಸುಕಲ್ಲು ಎಂಬ ಅರ್ಥ ಬರುವ ಒಗಟನ್ನು ಹೇಗೆ ಅರ್ಥೈಸಿದ್ದಾರೆ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:** **4 x 3 = 12**

20. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು"
21. "ದೇವರೇ ಮರ ಹತ್ತುವಷ್ಟು ಅವಕಾಶ ಕಲ್ಪಿಸು"
22. "ಹೊಡೆದರೋ ಗುಂಡ ಕರುಣ ಇಲ್ಲದ್ಹಂಗ"
23. "ಮಂಗಳಲೋಕದ ಅಂಗಳಕೇರಿ"

**ಈ ಕೆಳಗಿನ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ:**

24. ದೇವನೂರು ಮಹದೇವ
25. ಲಕ್ಷ್ಮೀಶ

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ:** **1 x 4 = 4**

26. ಪುಟ್ಟಿದ ನೂರ್ವರು________
____________________
____________________
____________ಛಲಮನೆ ಮೆಱೆವೆಂ

**ಅಥವಾ**

ನೆಲಕಿಜೆವನೆಂದು __________
____________________
____________________
________ಮತ್ತೆ ಪುದುವಾಟ್ದಪನೇ

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ:** **1 x 4 = 4**

27. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **2 x 4 = 8**

28. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ರಾಜ್ಯ' ಹೇಗಾಯಿತು?

ಅಥವಾ

ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

29. ಕರ್ಣನಿಗೆ ಶ್ರೀ ಕೃಷ್ಣನು ಒಡ್ಡಿದ ಆಮಿಷಗಳೇನು?

**ಅಥವಾ**

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:** **2 + 2 = 4**

ಸರಿ ಯಾವುದು ತಪ್ಪು ಯಾವುದೆಂದು ನಿರ್ಣಯ ಮಾಡುವುದು ಸುಲಭವಲ್ಲ, ನೀನು ರಹಸ್ಯದಲ್ಲಿ ಒಂದನ್ನೂ ಮಾಡಬೇಡ; ಮರೆಮಾಡಬೇಕೆಂದೆನಿಸುವ ಕೆಲಸ ಕಾರ್ಯಕ್ಕೂ ಕೈ ಹಾಕಬೇಡ, ತೆರೆಯ ಮರೆಯಲ್ಲಿ ಕೆಲಸ ಮಾಡಬೇಕೆಂದು ನಿನಗೆ ಅನಿಸಿದರೆ ಭಯವಿದೆ ಎಂದರ್ಥ. ಭಯವು ಒಳ್ಳೆಯದಲ್ಲ; ನಿನಗೆ ಯೋಗ್ಯವಾದುದ್ದಲ್ಲ, ನಿರ್ಭಯವಾಗಿರು, ಆಗಬೇಕಾದುದ್ದೆಲ್ಲ ಆಗುತ್ತದೆ; ನಡೆಯಬೇಕಾದುದೆಲ್ಲ ನಡೆಯುತ್ತದೆ. ನೀನು ಧೈರ್ಯಶಾಲಿಯಾದರೆ ನಿನಗೆ ಭಯವಾಗುವುದಿಲ್ಲ, ತಲೆ ತಗ್ಗಿಸುವಂಥಹ ಕೆಲಸ ಮಾಡುವುದಿಲ್ಲ, ರಹಸ್ಯದಲ್ಲಿ ಒಂದು ಕೆಲಸವೂ ಬೇಡ; ಕಣ್ಮರೆಯ ಕೆಲಸ ಬೇಡವೇ ಬೇಡ, ಏಕಾಂತವಿರಲಿ ಇರಬೇಕು; ಏಕಾಂತಕ್ಕೂ ರಹಸ್ಯಕ್ಕೂ ವ್ಯತ್ಯಾಸವಿದೆ. ಪ್ರಿಯಾ, ನೀನು ಹಾಗೆ ಮಾಡಿದ್ದಾದರೆ ನೀನು ಜ್ಯೋತಿಯ ಮಗುವೆನಿಸುವೆ, ಏನೇ ಬಂದೊದಗಲಿ ನಿರ್ಭಯಳೆನಿಸುವೆ, ನಿರ್ಮಲೆ ಎನಿಸುವೆ, ಏನೇ ಬಂದೊದಗಲಿ ನಿರ್ಭಯಳೆನಿಸುವೆ. ನಿರ್ಮಲೆ ಎನಿಸುವೆ, ನಿಶ್ಚಲಳೆನಿಸುವೆ, ಮಗೂ, ಇಂದಿಗಿಷ್ಟು ಸಾಕು, ನೀನು ದೊಡ್ಡವಳಾಗಿ ವೀರರಮಣಿಯೆನಿಸು; ಭಾರತಮಾತೆಯ ಸೇವೆ ಸಲ್ಲಿಸು. ಪೂರ್ಣ ವಾತ್ಸಲ್ಯದಿಂದ ಹರಸುವೆನು.

**30. ಪ್ರಶ್ನೆಗಳು:** ಅ) ಲೇಖಕರು ಭಯದ ಬಗ್ಗೆ ಹೇಳಿರುವ ಮಾತುಗಳೇನು?

ಆ) ಲೇಖಕರು ಪ್ರಿಯಾಳಿಗೆ ಯಾವ ಗುಣಗಳನ್ನು ಅಳವಡಿಸಿಕೊಳ್ಳಲು ಸೂಚಿಸಿದ್ದಾರೆ?

## ಭಾಗ – 'ಬಿ' (ವ್ಯಾಕರಣ, ಛಂದಸ್ಸು, ಅಲಂಕಾರ)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ:** **10 x 1 = 10**

31. ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಾಕ್ಷರಗಳ ಸಂಖ್ಯೆ

ಎ) 25 ಬಿ) 09 ಸಿ) 10 ಡಿ) 05

32. ಪ್ರಥಮ ಪುರುಷ ಸರ್ವನಾಮಕ್ಕೆ ಉದಾಹರಣೆ

ಎ) ನಾನು ಬಿ) ನೀನು ಸಿ) ಅದು ಡಿ) ನಾವು

33. ಪಂಚಮೀ ವಿಭಕ್ತಿಯ ಕಾರಕಾರ್ಥ

ಎ) ಸಂಪ್ರದಾನ ಬಿ) ಅಪಾದಾನ ಸಿ) ಸಮಾಧಾನ ಡಿ) ಅಧಿಕರಣ

34. ಕೆಳಗಿನವುಗಳಲ್ಲಿ ವಿಧ್ಯರ್ಥಕ ಕ್ರಿಯಾಪದ

ಎ) ಮುಟ್ಟೋಣ ಬಿ) ಮಾಡಲಿ ಸಿ) ಕೇಳುವೆವು ಡಿ) ನೋಡಳು

35. 'ಹೊಸಗಾಲ' ಈ ಪದವು ಯಾವ ಸಂಧಿಗೆ ಉದಾಹರಣೆಯಾಗಿದೆ.

ಎ) ಲೋಪ ಸಂಧಿ ಬಿ) ಗುಣ ಸಂಧಿ ಸಿ) ಆಗಮ ಸಂಧಿ ಡಿ) ಆದೇಶ ಸಂಧಿ

36. 'ನಡುರಾತ್ರಿ' ಪದವು ಈ ಸಮಾಸಕ್ಕೆ ಸೇರಿದೆ

ಎ) ಕರ್ಮಧಾರಯ ಬಿ) ಅಂಶಿ ಸಿ) ದ್ವಂದ್ವ ಡಿ) ಕ್ರಿಯಾ

37. ಇಸವಾಸ – ಪದದ ಗ್ರಾಂಥಿಕ ರೂಪ

ಎ) ವಿಶ್ವಾಸ ಬಿ) ವಿಸವಾಸ ಸಿ) ಸಹವಾಸ ಡಿ) ವನವಾಸ

38. 'ಅರ್ಕ' ಪದದ ತದ್ಭವ ರೂಪ

ಎ) ಸೂರ್ಯ ಬಿ) ಅಕ್ಷರ ಸಿ) ಎಕ್ಕ ಡಿ) ಚಂದ್ರ

39. ಈ ಕೆಳಗಿನವುಗಳಲ್ಲಿ ಅವಧಾರಣಾರ್ಥಕಾವ್ಯಯಕ್ಕೆ ಉದಾಹರಣೆ

ಎ) ಸುಮ್ಮನೆ ಬಿ) ತಟ್ಟನೆ ಸಿ) ಬೇಡ ಡಿ) ಅವನೇ

40. ಇವುಗಳಲ್ಲಿ ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ

ಎ) ಬಳೆಗಾರ ಬಿ) ಜಾಣತನ ಸಿ) ಚಂದ್ರನಂತೆ ಡಿ) ನಿನಗಾಗಿ

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ:**

41. ತಂಬಾಕು : ಪೋರ್ಚುಗೀಸ್ : : ಕಾಗದ : ____________

42. ಇನ : ಸೂರ್ಯ : : ಅವನಿ : ____________

43. ಧಗಧಗ : ಅನುಕರಣಾವ್ಯಯ : : ಬೇಗ ಬೇಗ : ____________

44. ಪುಟ್ಟರೆ : ಭಗಣ : : ನಿನಗೆ : ____________

**45. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ:** **1 x 3 = 3**

ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು

ಳ್ನನ್ನೆಮ್

**ಅಥವಾ**

ಅಂತೆಂಬನಾರ್ಗೆ ಪಿರಿದುಂ

ಭ್ರಾಂತುದಲೇಂ ದ್ರೋಣನೆಂಬನೇ ಪಾರ್ವನೆ ಪೇ

**46. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಡನೆ ಬರೆದು ಸಮನ್ವಯಗೊಳಿಸಿ:** **1 x 3 = 3**

ಶಾನುಭೋಗರ ವದನಾರವಿಂದದಲ್ಲಿ ಮುಗುಳುನಗೆ ಮೂಡಿತು

**ಅಥವಾ**

ಬಳಾರಿಯ ಮನೆಯಂ ಕುಜೆಯಂ ಪುಗಿಸುವಂತೆ

**ಭಾಗ – 'ಸಿ' (ವಾಕ್ಯರಚನೆ)**

**47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೊಂದನ್ನು ವಿಸ್ತರಿಸಿ ಬರೆಯಿರಿ:** **1 x 3 = 3**

* ಜನನೀ ಜನ್ಮಭೂಮಿ ಸ್ವರ್ಗಕ್ಕಿಂತ ಮಿಗಿಲು
* ಕೂಡಿ ಬಾಳಿದರೆ ಸ್ವರ್ಗಸುಖ
* ಹಾಸಿಗೆ ಇದ್ದಷ್ಟು ಕಾಲು ಚಾಚು

**48. ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ ಚಂದನ ಎಂದು ಭಾವಿಸಿಕೊಂಡು** **1 x 5 = 5**

ಕನ್ನಡ ವ್ಯಾಕರಣ ದೀಪಿಕೆ ಪುಸ್ತಕಗಳನ್ನು ಕಳುಹಿಸುವಂತೆ ಕೋರಿ ಸ್ವಪ್ನ ಬುಕ್ ಸ್ಟಾಲ್, ಬೆಂಗಳೂರು ಇವರಿಗೆ ಒಂದು ಪತ್ರ ಬರೆಯಿರಿ.

**ಅಥವಾ**

**ನಿಮ್ಮನ್ನು ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ರಮೇಶ / ರಜನಿ ಎಂದು ಭಾವಿಸಿಕೊಂಡು**

ಹುಟ್ಟುಹಬ್ಬದ ಶುಭಾಶಯ ಕೋರಿ ದಾವಣಗೆರೆಯಲ್ಲಿರುವ ನಿನ್ನ ಸ್ನೇಹಿತ ವಸಂತನಿಗೆ ಒಂದು ಮನವಿ ಪತ್ರ ಬರೆಯಿರಿ.

**49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

**1 x 5 = 5**

* ರಾಷ್ಟ್ರೀಯ ಭಾವೈಕ್ಯತೆ
* ಕಂಪ್ಯೂಟರ್ ಶಿಕ್ಷಣದ ಮಹತ್ವ
* ಬಾಲಕಾರ್ಮಿಕ ಪದ್ಧತಿ

ರವೀಶ್ ಕೆ. 8050557779